
# ನೆಲ ಮುಟ್ಟುವ ಪ್ರೀತಿ

ನಾನೇಕೆ
ಗುಡಿಸಲುಗಳ ಕುರಿತು
ಬರೆಯುತ್ತೇನೆಂದರೆ
ಗುಡಿಸಲಿನಲ್ಲಿಯೇ ಹುಟ್ಟಿ
ಅಲ್ಲಿಯೇ ಬೆಳೆದು– ನೀಲಕಂಠನಾದವ ನಾನು



ನಾನೇಕೆ
ಹರಕು ಕೌದಿಯ ಕುರಿತು
ಬರೆಯುತ್ತೇನೆಂದರೆ
ಹುಟ್ಟಿದ್ದು, ಮಲಗಿದ್ದು
ಬೆಳೆದದ್ದು ಅಲ್ಲಿಯೇ
ಆ ತೂತಿನ ಕೌದಿಯಲ್ಲಿಯೇ
ಚಂದಿರನ ನಗೆ ಕಂಡು
ಪುಲಕಗೊಂಡು
ರಾತ್ರಿಗೂ ಜೀವನ್ಮುಖಿಯಾದವ ನಾನು

ನಾನೇಕೆ
ಮುಂಗಾರು ಮಳೆಯ ಕುರಿತು
ಬರೆಯುತ್ತೇನೆಂದರೆ
ಮುಂಗಾರು ಮಳೆಯ
ಗುಡುಗು, ಮಿಂಚು, ಸಿಡಲಿನ
ಅಬ್ಬರದ ಜೊತೆ ಜೊತೆ
ಬೆಳೆದು
ಕೆರೆ, ಕಟ್ಟೆ, ಕಾಲುವೆ, ಬಾವಿಗಳಲಿ
ಈಸಿ, ದಡ ಸೇರಿದವ ನಾನು



ನಾನೇಕೆ
ಹಳ್ಳ, ಕೊಳ್ಳ, ಕೆರೆ, ಕಟ್ಟೆ, ಕಾಲುವೆಗಳ ಕುರಿತು
ಬರೆಯುತ್ತೇನೆಂದರೆ
ಇಲ್ಲಿಯೇ ಚಿನಿಪನಿ, ಕಣ್ಣು ಮುಚ್ಚಾಲೆ
ಗಜಗು, ಗೋಲಿ ಗುಂಡು
ಅಂಗಿ ಗುಂಡಿ ಆಟ ಆಡುತ್ತಾ
ಬೆವರಿಗೂ ಜೀವಕಳೆ ತಂದವ ನಾನು